ಶ್ರೀ ಎಂ. ವೀರಪ್ಪ ಮೊಯಿಲಿ.— ಸನ್ಮಾನ್ಯ ಮುಖ್ಯಮಂತ್ರಿಯವರು ಮಾತನಾಡುತ್ತಾ ಮೊಯಿಲಿಯವರು ನನ್ನ ರಾಜೀನಾಮೆ ಕೇಳಿದರು ಎಂದು ಹೇಳಿದರು. ತಾವು ರಾಜೀನಾಮೆ ಕೊಡಬೇಡಿ. ** ತಾವು ರಾಜೀನಾಮೆ ಕೊಡಬೇಡಿ. ನೈತಿಕವಾದ ಮೌಲ್ಯತಮಗೆ ಇದ್ದರೆ ರಾಜೀನಾಮೆ ಕೊಡಿ

(ಗೊಂದಲ)

ಅಧ್ಯಕ್ಷರು.— ಇಂತಹ ಶಬ್ದ ತಾವು ಉಪಯೋಗ ಮಾಡಬಾರದು. ಇದು ಸರಿಯಲ್ಲ. ಆ ಪದ ಅನ್‌ಪಾರ್ಲಿಮೆಂಟರಿ ಇರಬಹುದು, ಇಲ್ಲದಿರಬಹುದು ಇಂತಹ ಶಬ್ದ ಉಪಯೋಗ ಮಾಡತಕ್ಕಂಥಾದ್ದು ಸರಿಯಲ್ಲ. I have exposed it

ಶ್ರೀ ಎಂ. ವೀರಪ್ಪ ಮೊಯಿಲಿ.— ನಾನು ಇದನ್ನು ಅವರಿಗೆ ಹೇಳಲಿಲ್ಲ.

ಅಧ್ಯಕ್ಷರು,—ತಾವು ಗೌರವಯುತವಾಗಿ ನಡೆದುಕೊಳ್ಳಬೇಕು. ನಿಮ್ಮ ಬಗ್ಗೆ ಅವರಿಗೂ ಗೌರವ ಇರಬೇಕು, ಅವರ ಬಗ್ಗೆ ನಿಮಗೂ ಗೌರವ ಇರಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಭಂಡರಿಂದ ಇದಕ್ಕಿಂತ ಉತ್ತಮವಾದ ವಾಕ್ಯ ಎಲ್ಲಿ ಬರಬೇಕು ?

ಅಧ್ಯಕ್ಷರು,—ಆಯಿತು, ಇದಕ್ಕೆ ಏನು ಉತ್ತರ ಹೇಳುತ್ತೀರಿ ಹೇಳಿ.

ಶ್ರೀ ರಾಮಕೃಷ್ಣ ಹೆಗಡೆ.—ಇದಕ್ಕೆ ಉತ್ತರ ಹೇಳುವುದಿಲ್ಲ. ಇದಕ್ಕೆ ಕ್ಲಾರಿಫಿಕೇಷನ್ ಕೊಡುವುದಿಲ್ಲ. ಅವರು ಮಾಡಿದಂಥ ಭಾಷಣಕ್ಕೆ ನಾನು ಪುನಃ ಕಾಮೆಂಟ್ ಮಾಡುವುದಕ್ಕೆ ಹೋಗುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅಂತಹ ಶಕ್ತಿ ನಿಮ್ಮ ಪಕ್ಷದಲ್ಲಿರ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಕಂಪ್ಲೇಂಟ್ ಓದಿರಿ.

ಅಧ್ಯಕ್ಷರು.— ಈ ವಿಚಾರ ಇಲ್ಲಿಗೆ ಮುಕ್ತಾಯವಾಯಿತು. ಈಗ ಗವನ ಸೆಳೆಯುವ ಸೂಚನೆಗಳು ಶ್ರೀ ಎಸ್. ಬಂಗಾರಪ್ಪ, ಬಿ. ಸ್ವಾಮಿರಾವ್, ಬಿ. ಲಕ್ಕಪ್ಪ, ಶ್ರೀ ಎಂ. ವೀರಪ್ಪ ಮೊಯಿಲಿ ಮತ್ತು ಶ್ರೀಮತಿ ಸುಮಾ ವಸಂತ್ ಅವರುಗಳು ಗವನ ಸೆಳೆಯಬಿಹುದು,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಅಧ್ಯಕ್ಷರೇ, ಇದಕ್ಕೆ ಇನ್ನೂ ಉತ್ತರ ಕೊಟ್ಟಿಲ್ಲ. ಕಂಪ್ಲೇಂಟ್ ಓದಿ ಎಂದು ಹೇಳಿದರೆ ಓದುತ್ತಿಲ್ಲ.

ಅಧ್ಯಕ್ಷರು.— ಈಗ ಇದು ಮುಕ್ತಾಯವಾಗಿದೆ. ನಾನು ಗವನ ಸೆಳೆಯುವ ಸೂಚನೆಯೆನ್ನು ತೆಗೆದುಕೊಂಡಿದ್ದೇನೆ. ನಾನು ಸದಸ್ಯರ ಹೆಸರನ್ನು ಕರೆದಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಸಿ.ಬಿ.ಐ. ಎನ್‌ಕ್ವೈರಿ ಮೇಲೆ ಇಂಪ್ರೆಷನ್ ಹಾಕತಕ್ಕದ್ದು, ಇನ್‌ವೆಸ್ಟಿಗೇಷನ್ ಕೆಡಿಸತಕ್ಕದ್ದನ್ನು ಮಾಡುತ್ತಿದ್ದಾರೆ, ಕೇಂದ್ರ ಸರಕಾರವನ್ನು ದೂರತಕ್ಕಂಥ ಕೆಲಸ ಮಾಡುತ್ತಿದ್ದಾರೆ ಆಮೇಲೆ ರಶೀದ್ ಅವರು ಕೊಟ್ಟಂಥ ಕಂಪ್ಲೇಂಟ್ ಓದಿ ಎಂದರೆ ಓದುತ್ತಿಲ್ಲ. ಅವರು ಸರಿಯಾದ ಉತ್ತರ ಕೊಡಲಿಲ್ಲ. ಇದನ್ನು ನಾವು ಪ್ರತಿಭಟಿಸಿ ವಾಕ್‌ಔಟ್ ಮಾಡುತ್ತಿದ್ದೇವೆ.

(ಕಾಂಗ್ರೆಸ್ (ಐ) ಸದಸ್ಯರುಗಳು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು.— ನಿಮ್ಮದು ಕಾಲಿಂಗ್ ಅಟೆನ್‌ಷನ್ ನೋಟೀಸ್ ಇದೆ.

ಶ್ರೀ ರಾಮಕೃಷ್ಣ ಹೆಗಡೆ.— ಮಾನ್ಯ ಅಧ್ಯಕ್ಷರೇ, ಅವರು ಪ್ರತಿಭಟನೆ ಮಾಡಿ ಹೊರಗಡೆ ಹೋಗುತ್ತಿದ್ದಾರೆ. ಅವರಿಗೆ ಒಂದು ನಿಮಿಷ ಇದು ಮರೆತು ಹೋಗಿತ್ತು, ನೀವು ಆಜೆಂಡಾದಲ್ಲಿ ಮುಂದಿನ ಐಟಮ್ ತೆಗೆದುಕೊಂಡ ಮೇಲೆ ಅವರಿಗೆ ಇದ್ದಕ್ಕಿದ್ದ ಹಾಗೆ ನೆನಪಾಯಿತು, ಅವರ ಲೀಡರ್ ಅವರು ಮೊದಲೇ ವಾಕ್ ಔಟ್ ಮಾಡುತ್ತೇವೆಂದು ಹೇಳಿ ಸೂಚನೆ ಕೊಟ್ಟಿದ್ದರು. ಆಗ ಇವರು ತಮ್ಮ ಮತಿಪ್ರೇರಣೆಯಿಂದ ಆದಕ್ಕೆ ಮನ್ನಣೆ ಕೊಡಲಿಲ್ಲ ಆದರೆ ಒಂದು ಮಾತನ್ನು ಇಲ್ಲಿ ನಾನು ಖಂಡಿಸಲಿಕ್ಕೆ ಬಯಸುತ್ತೇನೆ, ಈ ಸರಕಾರ ಸಿ.ಬಿ.ಐ.ಗೆ ವಿರುದ್ಧ ಇದೆ, ಸಿ ಬಿ.ಐ. ಜೊತೆಗೆ ಸಹಕಾರ ಮಾಡುವುದಿಲ್ಲ

** ಅಧ್ಯಕ್ಷರ ಆದೇಶದ ಮೇರೆಗೆ ತೆಗೆದು ಹಾಕಲಾಗಿದೆ.